# ಸ್ವಾಮಿ ಮುಖ್ಯಪ್ರಾಣ ನಿನ್ನ

1. **Ref.:** Purandara Sahitya Darshana, Samputa 1, Adhyatma Darshana edited by Prof. S.K. Ramachandra Rao, page No. 413.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 37.
3. **Note:** Lyrics are as per Ref. 1. The wordings in Ref. 2 are same as in Ref. 1 but with minor differences, which are not considered here.
4. **Note:** Lyrics given without highlights are as per Ref. 1. This is checked, corrected and approved by Dr. Vyasanakere Prabhanjanachar.
5. **Note:** Singer has followed these lyrics (as in Ref. 1)
6. **Note:** The wordings, as per Ref. 2, are given below separately in yellow highlights, for the purpose of studies by researchers.

ರಾಗ: ಮಧ್ಯಮಾವತಿ ತಾಳ: ಆದಿ

ಸ್ವಾಮಿ ಮುಖ್ಯಪ್ರಾಣ ನಿನ್ನ
ಮಲೆವರ ಗಂಟಲ ಗಾಣ
ನೀ ಹಿಡಿದ್ಯೋ ರಾಮನ ಚರಣ ನೀ
ನ್ವಾದೌದೊ ಜಗತ್ಪ್ರಾಣ ॥ ಪ ॥

ಸಂಜೀವನ ಪರ್ವತವ ನೀ
ನಂಜದೆ ತಂದ್ಯೋ ದೇವ
ಅಂಜನೆ ಸುತ ಸದಾಕಾವ ಹೃ-
ತ್ಕಂಜ ವಾಸ ಸರ್ವ ಜೀವ ॥ ೧ ॥

ಏಕಾದಶಿಯ ರುದ್ರ ನೀ
ಒಯ್ದ್ಯೋ ರಾಮರ ಮುದ್ರ
ಸಕಲ ವಿದ್ಯಾ ಸಮುದ್ರ ನೀ
ನ್ವಾದೌದೋ ಬಲಭದ್ರ ॥ ೨ ॥

ವೈಕುಂಠದಿಂದ ಬಂದು ನೀ

ಪಂಪಾ ಕ್ಷೇತ್ರದಿ ನಿಂದು
ಯಂತ್ರೋದ್ಧಾರಕನೆಂದು ಪು-
ರಂದರ ವಿಠಲ ಸಲಹೆಂದು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹಂಪಿಯಲ್ಲಿ ವ್ಯಾಸತೀರ್ಥರು ಪ್ರತಿಷ್ಠೆ ಮಾಡಿದ ಯಂತ್ರೋದ್ಧಾರಕ ಪ್ರಾಣದೇವರನ್ನು ಕುರಿತ ಸ್ತುತಿ ಇದು. ಈ ಯಂತ್ರದ ನಡುವೆ ಯೋಗಮುದ್ರೆಯಲ್ಲಿ ಕುಳಿತ ಹನುಮಂತನಿದ್ದಾನೆ; ಯಂತ್ರವನ್ನು ಸುತ್ತುರಿದ ನಿರ್ದಿಷ್ಟ ಗ್ರಂಥಿ ಸ್ಥಳಗಳಲ್ಲಿ ವಾನರ ಪರಿವಾರಮೂರ್ತಿಗಳಿವೆ. ಹನುಮಂತನ ಸುತ್ತ ಷಟ್ಕೋಣಯಂತ್ರವಿದೆ (ಯುಗನದ್ಧ ತ್ರಿಕೋಣದ್ವಯ). ವೃತ್ತದೊಳಗೆ ಗ್ರಂಥಾಕ್ಷರಗಳಲ್ಲಿ ಮಂತ್ರೋಲ್ಲೇಖನವಿದೆ; ಇದರಿಂದ ಯಂತ್ರೋದ್ಧಾರ ಸಾಧ್ಯವಾಗಿದೆ. ಆದುದರಿಂದಲೇ ಇದು ಯಂತ್ರೋದ್ಧಾರಕ ಯಂತ್ರ.

**ಮಲೆವರ** – ಸೆಣಸುವವರ, ಎದುರಿಸುವವರ

**ಹೃತ್** = ಹೃದಯ, ಎದೆಯ, ಅಂತಃಕರಣ, ಮನಸ್ಸು

**ಕಂಜ** = ಕಮಲಾ, ತಾವರೆ

**ಏಕಾದಶಿಯ ರುದ್ರ =** ಏಕಾದಶಿಯ ಇಂದ್ರಿಯಗಳಿಗೆ ಅಧಿಪತಿಯಾದ ರುದ್ರನಾಮಕ ವಾಯುದೇವರು ಎಂದರ್ಥ.

**ಸಕಲ ವಿದ್ಯಾ ಪ್ರವೀಣ** - ಹನುಮಂತನು ಸೂರ್ಯನಿಂದ ವ್ಯಾಕರಣ ಸೂತ್ರ, ಸೂತ್ರ ವೃತ್ತಿ, ಭಾಷ್ಯ ಮತ್ತು ಸಂಗ್ರಹಗಳನ್ನು ಕಲಿತನು. ಇದಲ್ಲದೆ ಇವನು ಹನ್ನೊಂದನೆಯ ವ್ಯಾಕರಣಕಾರ, ವಾಗ್ಗೇಯಕಾರನೂ ಆಗಿದ್ದಾನೆ. (ಇವನ ಮತವನ್ನು ಉಳಿದ ವಾಗ್ಗೇಯಕಾರರು ಉದಾಹರಿಸುತ್ತಾರೆ)

**ಮುದ್ರಾ** = ಮುದ್ರಿಕೆ

**ವೈಕುಂಠ ಸ್ಥಳದಿಂದ ಬಂದು** = ಇದೊಂದು ಸ್ಥಳ ಪುರಾಣದ ಕಥೆಯು. (ಯಂತ್ರೋದ್ಧಾರ ಪ್ರಾಣ ದೇವರ ಮೂರ್ತಿ ವೈಕುಂಠದಿಂದ ಬಂದುದು.)

**ಪಂಪಾ ಕ್ಷೇತ್ರ** = ತುಂಗಭದ್ರಾ ನದಿ ತೀರದಲ್ಲಿರುವ ಹಂಪೆ.

**ಯಂತ್ರೋದ್ಧಾರಕ** = ಹಂಪೆಯಲ್ಲಿರುವ ಪ್ರಾಣ ದೇವರ ಹೆಸರು. ಕಪಿಬಂದಬದ್ಧ ವರ್ತುಲದಲ್ಲಿರುವ ಸಮ ಭುಜವುಳ್ಳ ಎರಡು ತ್ರಿಕೋಣಗಳ ನಟ್ಟ ನಡುವೆ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಸುತ್ತಲೂ ಬೀಜಾಕ್ಷರಗಳನ್ನು ಕೆತ್ತಿದ್ದಾರೆ.

**Classification:** Keerthane

**Ankita:** purandara vittala

**Location:** Yantrodharaka Temple, Hampi, Karnataka.

**Category:** Hanuma Stuti, Pooja Tatva

**Sub-Category:** hanuma, yantroddharaka, rama, hrudaya, jiva, Ekadashi, Samudra, vidya, hampi,

**Pravachana:** NA

**Explanation:** NA

**Note:** Below given lyrics, given in yellow highlights, are as per Ref. 2 above. These are given here for the purpose of study by the researchers.

ರಾಗ: ಮಧ್ಯಮಾವತಿ ತಾಳ: ಆದಿ

ಸ್ವಾಮಿ ಮುಖ್ಯಪ್ರಾಣ ನಿನ್ನ
ಮಲೆವರ ಗಂಟಲ ಗಾಣ ॥ ಪ ॥
ಸಕಲ ವಿದ್ಯಾ ಪ್ರವೀಣ ನೀ
ಹಿಡಿದೆಯೊ ರಾಮರ ಚರಣ ॥ ಅಪ ॥

ಏಕಾದಶಿಯ ರುದ್ರ ನೀ
ಹಿಡಿದೆಯೊ ರಾಮರ ಮುದ್ರಾ
ಸೇತುವೆ ಗಟ್ಟಿ ಸಮುದ್ರ ನೀ
ಹಾರಿದೆಯೋ ಬಲಭದ್ರ ॥ ೧ ॥

ಸಂಜೀವಿನಿ ಪರ್ವತವನ್ನು
ಅಂಜದೆ ತಂದೆಯೊ ನೀನು
ಅಂಜನೆ ತಾನು ಸಂಭವನು ನಿನ್ನ
ಬೇಡಿಕೊಂಬೆನೊ ನಾನು ॥ ೨ ॥

ವೈಕುಂಠದಿಂದ ಬಂದು
ಪಂಪಾ ಕ್ಷೇತ್ರದಿ ನಿಂದು

ಯಂತ್ರೋದ್ಧಾರಕನೆಂದು ಪು-

ರಂದರ ವಿಠಲನೆ ಸಲಹೆಂದು || ೩ ||